# ಚುಕ್ಕಿ ಚಿತ್ತಾರ

ಭಾವ ಭಿತ್ತಿಯ ಮೇಲೆ
ನೀನಿಟ್ಟ ಚುಕ್ಕಿ
ಉಳಿದುಬಿಡಬಹುದಿತ್ತು
ಬರಿ ಬಿಂದುವಾಗಿ
ಅಕ್ಕ ಪಕ್ಕದವೆಲ್ಲ ಮಾರುದ್ದ ದೂರ
ಎಂದು ಸಾರುತ್ತ
ನಡುವೆ ಕಿಡಿ ಕಾರುತ್ತ
ತಮ್ಮೊಳಗೆ ಒಂದೊಂದು ನಡುಗಡ್ಡೆಯಾಗಿ
ಕೈಚಾಚಿ ಹರಡಿ
ಬೆರಳನಷ್ಟುದ್ದ ನೀಡಿ
ಬರಸೆಳೆಯಬಹುದಿತ್ತು
ತಡಕಿ ಬೆಡಗ
ಭರವಸೆಯ ಬೆರಗ

ಬಿಟ್ಟಿದ್ದರೆ ಕಣ್ಣು
ಕಾಣುತಿತ್ತು ಸಾಲು
ಐದರದೋ ಮೂರರದೋ
ಇಲ್ಲ ಹದಿನೈದರದೋ
ಪರಿಚಯವೇ ಇರಲಿಲ್ಲ ಊರುಕೇರಿ

ಬೆರಳ ನಡುವಿನ ತೆರಪು
ಅರಸಿ ಮರಳೆಲ್ಲ
ಸೋರಿ ಕಣಕಣ
ಸೇರುತಿರುವಲ್ಲಿ ತಿರೆಯ
ಏರಿಸಿದೆನೊಂದಿಷ್ಟು ರಂಗು ಪುಡಿ
ಪರಿಮಳದ ಪುನುಗು

ಎಳೆ ಎಳೆದು
ಕೊಳೆ ಕಳೆದು
ಕೂಡಿಟ್ಟೆ ಚುಕ್ಕಿಗಳ
ಭಾವ ಚಿತ್ತಾರದಲಿ
ಹೊಳೆದು ಕಣ್ಸೆಳೆದು
ನಳನಳಿಸುತಿದೆಯಿಂದು
ಮನೆಯೆದುರು ನನ್ನದೇ
ಚುಕ್ಕಿ ರಂಗೋಲಿ

● **ಸಹನಾ ಹೆಗಡೆ**



ವಾಗೀಶ ಹೆಗಡೆ